ಪ್ರಧಾನ ದಿವಾಣಿ ನ್ಯಾಯಾದೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.  ಧಾರವಾಡ

ಸಿ.ಸಿ.ನಂಬರ ಃ 70/2014

**ಸಿಡಬ್ಲ್ಯು ಃ 4   ಪಿಡಬ್ಲ್ಯು ಃ  4**

ಸಾಕ್ಷಿದಾರನ ಹೆಸರು ಃ- ಮಹಮ್ಮದಅಲಿ ಶೇಖ
ತಂದೆಯ ಹೆಸರು ಃ- ರಸೂಲಸಾಬ
ವಯಸ್ಸು ಃ- 45
ಉದ್ಯೋಗ ಃ- ಸೈಕಲ್ ಅಂಗಡಿ
ವಾಸಸ್ಥಳ ಃ- ಧಾರವಾಡ

ಸತ್ಯ ಪ್ರತಿಜ್ಞೆ ಮೇರೆಗೆ ಃ 19-10-2016

**ಮುಖ್ಯ ವಿಚಾರಣೆ ಃ- ಮಾನ್ಯ ಸಸಅ ರವರಿಂದ.**

ಆರೋಪಿತರ ಕಡೆಯಿಂದ ನನ್ನ ಸಮಕ್ಷಮ ಯಾವುದೇ ರೀತಿ ಬಟ್ಟೆ ಜಪ್ತಿ ಮಾಡಿಲ್ಲ, ಹಾಗು ಅಟೋ ಜಪ್ತಿ ಮಾಡಿಲ್ಲ, ಆದರೆ ಈಗ ತೋರಿಸಿದ ಪಂಚನಾಮೆಯ ಮೇಲಿನ ಸಹಿ ನನ್ನದೇ ಇದ್ದು ಅದನ್ನು 2 ವರ್ಷದ ಹಿಂದೆ ಉಪನಗರ ಪೋಲಿಸರು ಠಾಣೆಯಲ್ಲಿ ಸಂಜೆ 5 ಗಂಟೆಗೆ ಪಡೆದಿರುತ್ತಾರೆ. ಬಟ್ಟೆ ಕಳ್ಳತನದ ಸಂಬಂದ ಪಂಚನಾಮೆ ಎಂದು ಹೇಳಿದರು, ಅದರೆ ಬಟ್ಟೆಯನ್ನು ಹಾಗೂ ಅಟೋವನ್ನು ತೋರಿಸಿಲ್ಲ, ಆರೋಪಿತರನ್ನು ಸಹ ತೋರಿಸಿಲ್ಲ. ಪಂಚನಾಮೆಯನ್ನು ನಿ.ಪಿ- 8 ಎಂದು ಸಹಿಯನ್ನು ನಿ.ಪಿ- 8ಎ ಎಂದು ಗುರುತಿಸಲಾಯಿತು.

**(ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಎಪಿಪಿಯವರಿಂದ**

25-7-2013 ರಂದು 1ರಿಂದ 2 ಗಂಟೆ ಮಧ್ಯ ನನ್ನ ಹಾಗು ಶಿವಾನಂದ ಸಮಕ್ಷಮ ಉಪನಗರ ಠಾಣೆಯ ಪೋಲಿಸರು ಇದೇ ಆರೋಪಿತರಿಂದ ಒಟ್ಟು 13 ಬಟ್ಟೆಗಳನ್ನು ಹಾಗೂ ಒಂದು ಕರಿ ಬಣ್ಣದ ಕೆಎ 25/ಡಿ 3900 ಅಟೋವನ್ನ ಜಪ್ತಿ ಮಾಡಿಕೊಂಡು ಪಂಚನಾಮೆ ಮಾಡಿ ಬರೆದು ಓದಿಹೇಳಿ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ, ಹಾಗು ನಕ್ಷೆ ಸಹ ಮಾಡಿದ್ದರು ಎಂದರೆ ಸರಿಯಲ್ಲ,

ಈ ಎಲ್ಲ ವಿಷಯಗಳು ಸತ್ಯವಾಗಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಶ್ರೀ ಎನ್ ಬಿ ಕೆ ವಕೀಲರಿಂದ**

ಅವರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ,

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು
ಮತ್ತು ಪ್ರದನ್ಯಾದಂ, ಧಾರವಾಡ